

# ಸಾತ್ವಿಕಾ ಹೊಸ ಕನಸು

'ಅಥಿ ಐ ಲವ್ ಯೂ' ಹಾಗೂ 'ಮಾಯಾನಗರಿ' ಸಿನಿಮಾಗಳಲ್ಲಿ ಈಚೆಗೆ ನಟಿಸಿದ್ದ ಸಾತ್ವಿಕಾ ರಾವ್ ಅವರಿಗೆ ಮತ್ತಷ್ಟು ಸಿನಿಮಾ ಆಫರ್‌ಗಳು ಒಂದರ ಹಿಂದೊಂದರಂತೆ ಬರುತ್ತಿವೆ. 'ಕನಸೊಂದು ಶುರುವಾಗಿದೆ' ಅವರ ಸಿನಿಮಾ ಪಟ್ಟಿಯಲ್ಲಿ ಹೊಸದಾಗಿ ಸೇರ್ಪಡೆಯಾಗಿರುವ ಸಿನಿಮಾ.

'ಹುಚ್ಚ 2' ಸಿನಿಮಾ ನಂತರ ಚಿತ್ರರಂಗದಿಂದ ಕೊಂಚ ಮರೆಯಾಗಿದ್ದ ಸಾತ್ವಿಕಾ, ತಮ್ಮ ಹೆಸರು ಬದಲಿಸಿಕೊಂಡು ಚಿತ್ರರಂಗಕ್ಕೆ ಮರಳಿದ್ದರು. ಆನಂತರ 'ಅಥಿ ಐ ಲವ್ ಯೂ', 'ಮಾಯಾನಗರಿ', 'ಮೋಡ ಕವಿದ ವಾತಾವರಣ' ಸಿನಿಮಾಗಳಲ್ಲಿ ನಟಿಸಿದ್ದರು. ವಿಭಿನ್ನ ಆಯಾಮದ ಪಾತ್ರಗಳಿಗೆ ಬಣ್ಣ ಹಚ್ಚಲು ಸದಾ ಸಿದ್ಧ ಎಂದಿದ್ದರು. 'ಔಟ್ ಆಫ್ ದಿ ಬಾಕ್ಸ್'ನಂಥ ಪಾತ್ರಗಳ ಕುರಿತು ತಮ್ಮ ನಿರೀಕ್ಷೆ ವ್ಯಕ್ತಪಡಿಸಿದ್ದರು. ಇದೀಗ ಅಂಥ ನಿರೀಕ್ಷೆಗಳು ನಿಜವಾಗುವ ಹಾದಿಯಲ್ಲಿರುವುದಾಗಿ ಹೇಳಿದ್ದಾರೆ.

'ಕನಸೊಂದು ಶುರುವಾಗಿದೆ', ಮಂಜೇಶ್ ನಿರ್ದೇಶನದ ಎರಡನೇ ಸಿನಿಮಾ. ಅಶ್ವಿನಿ ಪುನೀತ್ ರಾಜ್‌ಕುಮಾರ್ ಈ ಶೀರ್ಷಿಕೆ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಕೋರಿದ್ದಾರೆ. ಸಂತೋಷ್ ಬಿಲ್ವಾ ನಾಯಕನಾಗಿ ಅದೃಷ್ಟ ಪರೀಕ್ಷೆಗಿಳಿದಿದ್ದು, ಅವರಿಗೆ ಜೋಡಿಯಾಗಿದ್ದಾರೆ ಸಾತ್ವಿಕಾ.

ಸಸ್ಪೆನ್ಸ್ ಥ್ರಿಲ್ಲರ್ ಕಥಾಹಂದರದ ಈ ಚಿತ್ರ ನೋಡುಗರಿಗೆ ಇಷ್ಟವಾಗಲಿದೆ ಎಂಬುದು ಸಾತ್ವಿಕಾ ಭರವಸೆ. ಜೊತೆಗೆ ಶಶಾಂಕ್, ಸಿಂಪಲ್ ಸುನಿ ಹಾಗೂ ಪ್ರಮೋದ್ ಮರವಂತೆ ಚಿತ್ರದ ಹಾಡುಗಳಿಗೆ ಸಾಹಿತ್ಯ ಬರೆದಿದ್ದು, ಸೋನು ನಿಗಮ್, ರಾಜೇಶ್ ಕೃಷ್ಣನ್ ಹಾಗೂ ವಾಸುಕಿ ವೈಭವ್ ಹಾಡುಗಳಿಗೆ ಧ್ವನಿಯಾಗಿರುವುದು ಸಿನಿಮಾಗೆ ಪ್ಲಸ್ ಪಾಯಿಂಟ್ ಆಗುವ ನಿರೀಕ್ಷೆ ಚಿತ್ರತಂಡದ್ದು.

# ಶ್ರಾವಣಿ ಸುಬ್ರಮಣ್ಯ ಒನ್ಸ್ ಮೋರ್...

2013ರಲ್ಲಿ ಬಿಡುಗಡೆಯಾಗಿ, ಆಗಿನ ಕಾಲಕ್ಕೆ ಯಶಸ್ಸಿನ ಗಡಿ ಮುಟ್ಟಿದ ಸಿನಿಮಾಗಳಲ್ಲಿ ಅಮೂಲ್ಯ–ಗಣೇಶ್ ಜೋಡಿಯ 'ಶ್ರಾವಣಿ ಸುಬ್ರಮಣ್ಯ' ಕೂಡ ಒಂದು.

ಬಾಕ್ಸಾಫೀಸ್‌ನಲ್ಲಿ ಬರೋಬ್ಬರಿ 30 ಕೋಟಿ ರೂಪಾಯಿ ಕಲೆಕ್ಷನ್ ಮಾಡಿದ್ದ ಈ ಸಿನಿಮಾವನ್ನು ಮಂಜು ಸ್ವರಾಜ್ ನಿರ್ದೇಶಿಸಿದ್ದರು. ಹಲವು ಫ್ಲಾಪ್‌ಗಳನ್ನು




ಕಂಡಿದ್ದ ಗಣೇಶ್‌ಗೆ ಸಕ್ಸಸ್ ಅನ್ನು ಮರಳಿ ಕೊಟ್ಟ ಚಿತ್ರ ಕೂಡ ಇದಾಗಿತ್ತು. ಅಮೂಲ್ಯ–ಗಣೇಶ್ ಮುದ್ದಾದ ಜೋಡಿಯ ಪ್ರೇಮಕಥೆ ಹೊಸತನದಿಂದಲೂ ಪ್ರೇಕ್ಷಕರ ಮನ ಗೆದ್ದಿತ್ತು.

ಕಳೆದ ಡಿಸೆಂಬರ್ ತಿಂಗಳಿಗೆ 'ಶ್ರಾವಣಿ ಸುಬ್ರಮಣ್ಯ' ಸಿನಿಮಾ ಬಿಡುಗಡೆಯಾಗಿ ಹತ್ತು ವರ್ಷಗಳು ಪೂರ್ಣಗೊಂಡಿದ್ದು, ಇದರ ನೆನಪಾಗಿ ಈ ಸಿನಿಮಾದ ಮತ್ತೊಂದು ಭಾಗ ತೆರೆ ಕಾಣುವುದಾಗಿ ನಿರ್ಮಾಪಕ ಸುರೇಶ್ ಈಚೆಗೆ ಘೋಷಣೆ ಮಾಡಿದ್ದಾರೆ. ಈ ಹೊಸ ಸಿನಿಮಾಗೆ 'ಒನ್ಸ್ ಮೋರ್ ಶ್ರಾವಣಿ ಸುಬ್ರಮಣ್ಯ' ಎಂಬ ಹೆಸರಿಟ್ಟಿರುವುದಾಗಿ ತಿಳಿದುಬಂದಿದೆ.

ಸಿನಿಮಾಗಾಗಿ ಹೊಸ ಪ್ರತಿಭೆಗಳಿಗೆ ಆಡಿಷನ್ ಘೋಷಣೆ ಮಾಡಲಾಗಿದೆ. ಇದು ಕಾಮಿಡಿ–ರೊಮ್ಯಾಂಟಿಕ್ ಎಲಿಮೆಂಟ್‌ಗಳನ್ನು ಒಳಗೊಂಡಿದ್ದು, ಮುಂದಿನ ದಿನಗಳಲ್ಲಿ ಚಿತ್ರತಂಡ ಮತ್ತಷ್ಟು ಮಾಹಿತಿ ನೀಡಲಿರುವುದಾಗಿ ಹೇಳಿದೆ.